ಅಧ್ಯಾಪಕರು – ೨ (ಮುಖ್ಯೋಪಧ್ಯಾಯರೂ ಸೇರಿ)

(ಇ) ಶಾಲೆಗೆ ಬೇಕಾದ ಸಿಬ್ಬಂದಿಯನ್ನು ವಿದ್ಯಾ ಇಲಾಖೆಯು ಒದಗಿಸಿದೆ. ವಸತಿ ನಿಲಯಗಳ ಸೌಲಭ್ಯವನ್ನು ಈ ವರ್ಷ ಒದಗಿಸಲಾಗುವುದು.

(ಈ) ೧೨-೧೧-೧೯೮೨ ರಿಂದ ೩೧-೭-೧೯೮೩ (೯ ತಿಂಗಳು) ವರೆಗೆ ರೂ. ೨೫,೨೪೨-೦೦ ಸಿಬ್ಬಂದಿಗೆ ಖರ್ಚಾಗಿದೆ,

ಮೊಳಕಾಲ್ಮೂರಿನ ಶ್ರೀಮತಿ ಮರಿಯಮ್ಮ ಅವರಿಂದ ಕಾಲೇಜು ಕಟ್ಟಡದ ನಿರ್ಮಾಣಕ್ಕೆ ರೂ. ೨೦,೦೦೦ ಕೊಟ್ಟಿರುವುದು.

೩೭(೬೬) ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಮೊಳಕಾಲ್ಮೂರಿನ ಶ್ರೀಮತಿ ಮರಿಯಮ್ಮ ಇವರು ಸುಮಾರು ೧೨ ವರ್ಷಗಳ ಹಿಂದೆ ಕಾಲೇಜು ಕಟ್ಟಡ ಕಟ್ಟುವುದಕ್ಕೆ ೨೦ ಸಾವಿರ ರೂಪಾಯಿಗಳನ್ನು ಕೊಟ್ಟಿರುವುದು ನಿಜವೇ ?

(ಆ) ಹಾಗಿದ್ದಲ್ಲಿ ತ್ವರಿತವಾಗಿ ಕಟ್ಟಡ ಪ್ರಾರಂಭಿಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು ?

(ಇ) ಮೊಳಕಾಲ್ಮೂರಿಗೆ ಮೊದಲನೇ ದರ್ಜೆ ಕಾಲೇಜು ಮಂಜೂರು ಮಾಡಬಹುದಾಗಿ ಇಲಾಖೆಯವರು ತಿಪಾರಸು ಮಾಡಿರುವುದು ನಿಜವೇ ?

(ಈ) ಹಾಗಿದ್ದಲ್ಲಿ ಈವರೆಗೂ ಸದರಿ ಕಾಲೇಜನ್ನು ಮಂಜೂರು ಮಾಡದೆ ಇರುವುದಕ್ಕೆ ಕಾರಣಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಹೌದು.

(ಆ) ತ್ವರಿತವಾಗಿ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ತದರ್ತಾಗಿ ಬೇಕಾದ ಕೊಠಡಿಗಳ ನಕ್ಷೆ ಮತ್ತು ಅಂದಾಜು ತಯಾರಾಗುತ್ತಿದ್ದು, ಈ ವರ್ಷವೇ ಕಾರ್ಯ ಆರಂಭಿಸಲು ನಿರ್ದೇಶನ ನೀಡಲಾಗುವುದು.

(ಇ) ಹೌದು.

(ಈ) ಸ್ಥಳಾಭಾವ ಮತ್ತು ಹಣಕಾಸಿನ ಕೊರತೆಗಳಿಂದ ಇದುವರೆಗೆ ಕಾಲೇಜು ಮಂಜೂರಾಗಿಲ್ಲ.

ದಾವಣಗೆರೆಯಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಉಪಾಧ್ಯಾಯರುಗಳ ನೇಮಕಾತಿ

೨೮ (೧೮೪). ಶ್ರೀ ಪಂಪಾಪತಿ (ದಾವಣಗೆರೆ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ದಾವಣಗೆರೆಯಲ್ಲಿರುವ ಎಲ್ಲಾ ಪ್ರೈಮರಿ ಪ್ರೌಢಶಾಲೆ, ಕಾಲೇಜು ಹಾಗೂ ತಾಂತ್ರಿಕ ಶಾಲೆಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಉಪಾಧ್ಯಾಯರನ್ನು ನೇಮಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

(ಆ) ಶಾಲಾ ಕಾಲೇಜುಗಳಲ್ಲಿ ಆಟದ ಮೈದಾನ, ಯೋಗ್ಯ ಪ್ರಯೋಗ ಶಾಲೆ, ಮತ್ತು ಪುಸ್ತಕ ಭಂಡಾರಗಳು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

(ಇ) ಈ ಅಗತ್ಯಗಳನ್ನು ಪೂರೈಸಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು ?

(ಈ) ದಾವಣಗೆರೆಯಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಉಪಯೋಗಕ್ಕೋಸ್ಕರ ಯೋಗ್ಯವಾದ ಸಂಸಜ್ಜಿತವಾದ ಕ್ರೀಡಾಂಗಣ ಆಟದ ಮೈದಾನಗಳು ಇವೆಯೆ, ಇವುಗಳ ಸಂಖ್ಯೆ ಎಷ್ಟು ?